ಪ್ರವಾಸೋದ್ಯಮ ಅಭಿವೃದ್ಧಿ

1410(922); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ಪ್ರವಾಸೋದ್ಯಮದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಒದಗಿಸಿರುವ ಅನುದಾನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಇ) ರಾಜ್ಯದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳು ಯಾವುವು; (ವಿವರ ನೀಡುವುದು);

ಈ) ವಿದೇಶಿ ಪ್ರವಾಸಿಗರಿಗೆ ಸರ್ಕಾರ ನೀಡಿರುವ ಸೌಲಭ್ಯಗಳು ಯಾವುವು; (ಮಾಹಿತಿ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿಗರ ಅನುಕೂಲಕ್ಕಾಗಿ, ಯಾತ್ರಿನಿವಾಸ / ಡಾರ್ಮಿಟರಿ ಸೌಲಭ್ಯ ನಿರ್ಮಾಣ, ರಸ್ತೆ, ಅಭಿವೃದ್ಧಿ, ಕುಡಿಯುವ ನೀರು ಹಾಗೂ ಶೌಚಾಲಯ ಸೌಲಭ್ಯ, ಪರಗೋಲ, ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ, ಪ್ರವಾಸಿ ತಾಣಗಳಲ್ಲಿ ಮಾರ್ಗದರ್ಶಿ ಫಲಕಗಳ ಅಳವಡಿಕೆ, ಕಡಲ ತೀರಗಳ ಅಭಿವೃದ್ಧಿ, ಪ್ರವಾಸಿಗರಿಗೆ ಸುರಕ್ಷತೆ ಒದಗಿಸಲು ಪ್ರವಾಸಿ ಮಿತ್ರ ಯೋಜನೆ, ಮಾರ್ಗದರ್ಶಿ ತರಬೇತಿ ಕಾರ್ಯಕ್ರಮ ಮುಂತಾದ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇದರ ಜೊತೆಗೆ, ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ ಮೂಲಸೌಕರ್ಯ ಕಾಯ್ದೆ, ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮದಡಿ ಪ್ರವಾಸಿ ತಾಣಗಳನ್ನು ದತ್ತು ತೆಗೆದುಕೊಳ್ಳುವ ಕಾರ್ಯಕ್ರಮ, ಇಲಾಖಾ ಆಸ್ತಿಗಳ ಖಾಸಗೀಕರಣ, ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸುಗಳ ಅನುಷ್ಠಾನ, ಕರ್ನಾಟಕ ಮೂಲಸೌಲಭ್ಯ ನಿಗಮ ಸ್ಥಾಪನೆ, ಕಾವೇರಿ ಪ್ರವಾಸೋದ್ಯಮ

ಪ್ರಾಧಿಕಾರ ಸ್ಥಾಪನೆ, ನೂತನ ಪ್ರವಾಸೋದ್ಯಮ ನೀತಿ 2015–20, ತುರಹಳ್ಳಿ ನಗರ ಉದ್ಯಾನವನ ಸ್ಥಾಪನೆ, ಪ್ರವಾಸಿ ಉತ್ಪನ್ನಗಳ ಮೌಲ್ಯಮಾಪನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಮತ್ತು ದಿನಾಂಕ: 6, 7 ಮತ್ತು 8 ಸೆಪ್ಟಂಬರ್–2015 ರಂದು ಪಾಟಾ ಅಂತರಾಷ್ಟ್ರೀಯ ಮೇಳವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗುತ್ತಿದ್ದು, ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿದೆ.

ಆ) 2015–16ನೇ ಸಾಲಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರವು ರೂ. 406.47 ಕೋಟಿಗಳ ಅನುದಾನ ಒದಗಿಸಿದೆ. ಜಿಲ್ಲಾವಾರು ಅನುದಾನ ನಿಗದಿಪಡಿಸಿರುವುದಿಲ್ಲ.

ಇ) ರಾಜ್ಯದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಕೆಳಕಂಡ ಕಾರ್ಯಕ್ರಮಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದೆ.

ರಾಜ್ಯದ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಪ್ರವಾಸಿ ತಾಣಗಳ ಬಗ್ಗೆ ಉತ್ತಮ ಗುಣಮಟ್ಟದ ಛಾಯಾಚಿತ್ರೀಕರಣ ಹಾಗೂ ವೀಡಿಯೋ ಚಿತ್ರೀಕರಣ ಮಾಡಿ ಪ್ರಚಾರ ಸಿ.ಡಿ. ಗಳನ್ನು ಹೊರತರುವುದು, ಉತ್ತಮ ಗುಣಮಟ್ಟದ ಪ್ರಚಾರ ಮಡಿಕೆ ಹಾಗೂ ಕಾಫಿ, ಟೇಬಲ್ ಪುಸ್ತಕಗಳ ಮುದ್ರಣ, ಪ್ರಮುಖ ಸುದ್ದಿ ಮಾಧ್ಯಮಗಳಲ್ಲಿ (ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮ) ಜಾಹೀರಾತು, ಪ್ರಮುಖ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳು, ಮ್ಯಾಗ್‌ಜೀನ್‌ಗಳಲ್ಲಿ ಜಾಹೀರಾತು, ಸಾಮಾಜಿಕ ಜಲತಾಣಗಳನ್ನು ಉಪಯೋಗಿಸಿಕೊಂಡು ಪ್ರಚಾರ, ಪ್ರವಾಸಿ ಮಾಹಿತಿ ಕೇಂದ್ರಗಳನ್ನು ಹೆಚ್ಚಿಸಿ ಸವಲತ್ತುಗಳೊಂದಿಗೆ ಬಲಪಡಿಸುವುದು, ರಾಜ್ಯದ ವಿವಿಧ ಪ್ರವಾಸಿ ಸ್ಥಳಗಳಲ್ಲಿ ಪ್ರಚಾರ ಫಲಕ (ಹೋರ್ಡಿಂಗ್ಸ್) ಗಳನ್ನು ಅಳವಡಿಸುವುದು, ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮೇಳಗಳು ಮತ್ತು ರೋಡ್ ಷೋ ಗಳಲ್ಲಿ ಭಾಗವಹಿಸುವುದು, ಸುವರ್ಣರಥ

ಐಶಾರಾಮಿ ರೈಲು ಪ್ರವಾಸ ಪ್ಯಾಕೇಜ್‌ಗಳು, ಮೈಸೂರು ಹಾಗೂ ಹೈದ್ರಾಬಾದ್ ನಗರಗಳಿಂದ ಸುವ್ಯವಸ್ಥಿತ ಐಶಾರಾಮಿ ಬಸ್ ಪ್ರವಾಸ ಪ್ಯಾಕೇಜ್‌ಗಳ ಆಯೋಜನೆ, ಪರಿಸರ ಮತ್ತು ಸಾಹಸ ಪ್ರವಾಸೋದ್ಯಮ ಚಟುವಟಿಕೆಗಳ ಆಯೋಜನೆ ಹಾಗೂ ಮುಂತಾದ ಕಾರ್ಯಕ್ರಮಗಳು

ಈ) ಕೇಂದ್ರ ಸರ್ಕಾರವು ಜಾರಿ ತಂದಿರುವ ಇ-ವೀಸಾ ಸೌಲಭ್ಯದಿಂದಾಗಿ 76 ದೇಶಗಳ ವಿದೇಶಿ ಪ್ರವಾಸಿಗರು (ವೀಸಾ ಆನ್ ಅರೈವಲ್ ವ್ಯವಸ್ಥೆ) ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಪ್ರವಾಸಿತಾಣಗಳಿಗೆ ಭೇಟಿ ನೀಡುವರು.

ಪ್ರವಾಸೋದ್ಯಮ ಇಲಾಖೆಯಿಂದ ಕಾಮಗಾರಿಗಳು

1412(924); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ತುಮಕೂರು ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಇಲಾಖೆಯಡಿ ಬರುವ ಸ್ಥಳಗಳು ಯಾವುದು;

ಆ) ಈ ಸ್ಥಳಗಳಲ್ಲಿ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;

ಇ) ಸದರಿ ಸ್ಥಳಗಳ ಅಭಿವೃದ್ಧಿಗಾಗಿ ಸರ್ಕಾರ ವೆಚ್ಚ ಮಾಡಿರುವ ಅನುದಾನವೆಷ್ಟು; (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ತುಮಕೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕೆಳಕಂಡ ಪ್ರವಾಸಿ ತಾಣಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಲಾಗಿದೆ.

ಸಿದ್ಧಗಂಗ, ಕೈದಾಳ, ದೇವರಾಯನದುರ್ಗ